ಕೊಡುತಕ್ಕಂಥ ಸೂಚನೆಗಳು ಕೇಂದ್ರದಿಂದ ಬಂದಿದೆ. ಆದ್ದರಿಂದ ಈ ವರ್ಷ ರಿಬೇಟ್ ಸಿಕ್ಕೇ ಸಿಗುತ್ತದೆ. ಆದರೆ ಯಾರು ಖಾದಿಯಲ್ಲಿ ತೊಡಗೊದ್ದಾರೆ ಅವರು ಮುಂದೆ ರಿಬೇಟ್ ಮೇಲೆ ಹೊಂದಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಈ ಮನೆಯ ಮೂಲಕ ಅವರಿಗೆ ತಿಳಿಸಲಿಷ್ಟಪಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಇಂದು ನಾವು ಐದು ಪ್ರಶ್ನೆಗಳನ್ನು ಬಿಟ್ಟಾಗ್ಯೂ ಕೂಡ ಐದು ನಿಮಿಷ ಮಾತ್ರ ಮೊದಲು ಮುಗಿಸಿದ್ದೇವೆ. ಅಂದರೆ ಇವತ್ತು ಕೂಡ ನಾವು ಕಲಾಪವನ್ನು ಸರಿಯಾಗಿ ಮಾಡುತ್ತಿಲ್ಲ. ಆದಕಾರಣ ಮಾನ್ಯ ಸದಸ್ಯರಲ್ಲಿ ಹಾಗೂ ಮಂತ್ರಿಗಳಲ್ಲಿ ನಾನು ವಿನಂತಿ ಮೂಡಿಕೊಳ್ಳುವುದೇನೆಂದರೆ ಪ್ರಶ್ನೆಗಳನ್ನು ಕೇಳುವಾಗ ಸದಸ್ಯರು ಸಂಕ್ಷಿಪ್ತವಾಗಿ ಕೇಳಬೇಕು. ಪ್ರಶ್ನೆಗಳನ್ನು ಮೊದಲೇ ಮನಸ್ಸಿನಲ್ಲಿ ರೂಪಿಸಿಕೊಂಡಿರಬೇಕು. ನೀವು ಪ್ರಶ್ನೆಗಳನ್ನು ಕೇಳುವಾಗ ಭಾಷಣ ಮಾಡುವುದು ಬೇಕಾಗಿಲ್ಲ. ಮಂತ್ರಿಗಳೂ ಸಹ ಎಲ್ಲಾ ಮಾಹಿತಿಯನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಸೂಕ್ಷ್ಮವಾಗಿ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರಗಳನ್ನು ಕೊಟ್ಟರೆ ನನಗೆ ಸಮಯವನ್ನು ನಿಯಂತ್ರಣ ಮಾಡುವುದಕ್ಕೆ ಸುಲಭವಾಗುತ್ತದೆ. ದಯವಿಟ್ಟು ಅದನ್ನೆಲ್ಲರೂ ಗಮನದಲ್ಲಿಟ್ಟು ಕೊಳ್ಳಬೇಕೆಂದು ನನ್ನ ವಿನಂತಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 19ನೇ ಪಟ್ಟಿಯಲ್ಲಿರುವ 46 ಪ್ರಶ್ನೆಗಳ ಪೈಕಿ 39 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಹುಡ್ಕೋ ಸಂಸ್ಥೆಯಿಂದ ಸಂಸ್ಥೆಗಳಿಗೆ ಬಿಡುಗಡೆಯಾದ ಹಣ

1548 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1997-98ನೇ ಸಾಲಿನಲ್ಲಿ ಹುಡ್ಕೋ ಸಂಸ್ಥೆಯು ಕರ್ನಾಟಕದಲ್ಲಿನ ವಿವಿಧ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಒಪ್ಪಿಗೆ ನೀಡಿದ ಮೊತ್ತವೆಷ್ಟು ?

ಆ) ಬಳ್ಳಾರಿ ಜಿಲ್ಲೆಯಲ್ಲಿನ ನೆರೆಹೊರೆಯ ಅಭಿವೃದ್ಧಿಗಾಗಿ ನಿವೇಶನಗಳು ಹಾಗೂ ಸೇವಾ ಯೋಜನೆಗಳಿಗೆ ಬಿಡುಗಡೆ ಮಾಡಲು ಉದ್ದೇಶಿಸಿರುವ ಮೊತ್ತವೆಷ್ಟು ?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ರೂ. 74.18 ಕೋಟಿಗಳು

ಆ) ಹುಡ್ಕೋ ಸಂಸ್ಥೆಯು ಹಣ ಬಿಡುಗಡೆ ಮಾಡಿದಲ್ಲಿ ರೂ.446.60 ಲಕ್ಷಗಳನ್ನು ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ವಿವಿಧ ಯೋಜನೆಗಳಡಿಯಲ್ಲಿ ಉಪಯೋಗಿಸಲು ಉದ್ದೇಶಿಸಲಾಗಿದೆ.